'ಆಕೆಯನ್ನು ಮದುವೆಯಾಗುತ್ತೀಯಾ' ಎಂದು ಅಪ್ಪ ಕೇಳಿದರು. ನಾನು ಒಪ್ಪಿದೆ. ಸರಳವಾಗಿ ಮದುವೆಯೂ ಆಯಿತು. ನನ್ನ ಅಪ್ಪ ಕೃಷ್ಣನ್ ಕೃಷಿಕರು. ಅಮ್ಮ ಉಮಾ ಗೃಹಿಣಿ. ಜಾನಕಿಯ ಮನೆಯಲ್ಲಿ ಕೊಂಚ ಕೃಷಿ ಜಮೀನು ಇದ್ದುದರಿಂದ ಆಧಾರವಿತ್ತು. ನಾನು ನನ್ನ ಅಧ್ಯಯನ, ಪ್ರವಾಸ, ಪ್ರದರ್ಶನವೆಂದು ಓಡಾಡುತ್ತಿದ್ದಾಗ ಸಂಸಾರ ನಡೆಸಿದವಳು ಜಾನಕಿ. ನಾನು ಕೊಟ್ಟಷ್ಟು ಹಣದಲ್ಲಿ ಆಕೆ ಮನೆ ನಿಭಾಯಿಸುತ್ತಿದ್ದಳು. ನೂರು ರೂಪಾಯಿ ಕೊಟ್ಟಾಗಲೂ ಅವಳು ಮನೆ ಸಂಭಾಳಿಸುತ್ತಿದ್ದಳು. ಪ್ರದೀಪ ಮತ್ತು ಪ್ರಸಾದ ಎಂಬ ಇಬ್ಬರು ಗಂಡುಮಕ್ಕಳ ಓದು-ಅಭ್ಯಾಸಕ್ಕೆ ಆಕೆ ಟೇಲರಿಂಗ್ ಮಾಡಿ ಹಣ ಹೊಂದಿಸುತ್ತಿದ್ದಳು. ದೆಹಲಿಯಲ್ಲಿ ನಾನಿದ್ದಾಗ ಆಕೆಯನ್ನು ತಕ್ಷಣಕ್ಕೆ ಕರೆಸಿಕೊಳ್ಳುವುದಕ್ಕೆ ಆಗಲಿಲ್ಲ. ಕೆಲವು ವರ್ಷಗಳ ನಂತರ ಒಂದು ಕ್ವಾರ್ಟ್ರಸ್ ಕೊಟ್ಟರು. ನಂತರ ಸಾಧ್ಯವಾದಾಗಲೆಲ್ಲ ಆಕೆಯನ್ನು ನಾನು ಜೊತೆಗೇ ಕರೆದುಕೊಂಡು ಹೋಗುತ್ತಿದ್ದೇನೆ. ಈಗ ಎರ್ನಾಕುಲಂನಲ್ಲಿ ಮಗನ ಮನೆಯಲ್ಲಿ ವಾಸವಾಗಿದ್ದೇವೆ.

◆ **ತಳಿಪರಂಬ ನಿಮ್ಮ ಪ್ರೀತಿಯ ಊರು. ಅಲ್ಲಿನ ಬಾಲ್ಯದ ನೆನಪುಗಳ ಬಗ್ಗೆ ಹೇಳಿ.**

ತಳಿಪರಂಬದಲ್ಲಿ ಬಾಲ್ಯದ ನೆನಪುಗಳಿವೆ ಮತ್ತದು ನನ್ನ ಪ್ರೀತಿಯ ಊರು ಎಂಬುದು ನಿಜ. ಆದರೆ ಇಲ್ಲಿ ಕಥಕಳಿ ಕಲಿಯುವುದಕ್ಕೆ ಅಷ್ಟೇನೂ ಸೌಕರ್ಯಗಳಿರಲಿಲ್ಲ. ಆದ್ದರಿಂದಲೇ ನಾನು ಈ ಊರನ್ನು ದಾಟಿ ಹೊರಜಗತ್ತನ್ನು ನೋಡುವುದು ಸಾಧ್ಯವಾಯಿತೇನೋ. ಆರನೇ ವಯಸ್ಸಿನಲ್ಲಿ ಶಾಲೆಯಲ್ಲಿ ಒಂದು ನೃತ್ಯತರಗತಿಗೆ ನಾನು ಉತ್ಸಾಹದಿಂದ ಸೇರಿದೆ. ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ತರಗತಿಗಳು ಮುಗಿದ ಬಳಿಕ ಆ ತರಗತಿ ನಡೆಯುತ್ತಿತ್ತು. ತರಗತಿ ಮುಗಿಸಿ ನಾನು ಉಸಿರು ಬಿಗಿಹಿಡಿದು ಓಡುತ್ತಾ ಐದು ಮೈಲು ದೂರದಲ್ಲಿರುವ ಮನೆ ತಲುಪುತ್ತಿದ್ದೆ. ಆಗೆಲ್ಲ ಬಸ್ಸು-ಗಾಡಿ ಏನೂ ಇರಲಿಲ್ಲ. ಒಂದು ಸಾರ್ತಿ ಶಾಲೆಯ ಮ್ಯಾನೇಜರ್ (ಕುರುಮಾತೂರ್ ನಾರಾಯಣನ್ ನಂಬೂದಿರಿಪಾದ್) ಒಬ್ಬರು ನಾನು ಹೀಗೆ ಓಡುತ್ತಿರುವುದನ್ನು ನೋಡಿ ತಡೆದು, 'ಯಾಕೆ ಹೀಗೆ ಯಾರೋ ಅಟ್ಟಿಸಿಕೊಂಡು ಬರುತ್ತಿರುವಂತೆ ಓಡುತ್ತಿದ್ದಿ?' ಎಂದು ಕೇಳಿದರು. 'ಮನೆ ದೂರದಲ್ಲಿದೆ, ನಾನಲ್ಲಿ ತಲುಪಬೇಕಲ್ಲ' ಎಂದು ಏದುಸಿರು ಬಿಡುತ್ತ ಹೇಳಿದೆ. ನನ್ನ ಪರಿಸ್ಥಿತಿಯನ್ನೂ, ಆಸಕ್ತಿಯನ್ನೂ ನೋಡಿ ಅವರು ನನಗೆ ವಸತಿ ವ್ಯವಸ್ಥೆ ಮಾಡಿದರು. ಕುಂಡಿವೀಟಿಲ್ ನಾರಾಯಣನ್ ನಾಯರ್ ಅವರು ನಮಗೆ ಕಥಕಳಿ ಹೇಳಿಕೊಡುತ್ತಿದ್ದರು. ಅವರೇ ನನ್ನ ಮೊದಲ ಗುರುಗಳು.

ಶಾಲೆಯ ವಾರ್ಷಿಕೋತ್ಸವದಲ್ಲೊಮ್ಮೆ ನಾನು ಸಣ್ಣದೊಂದು ಕಥಕಳಿ ಪ್ರದರ್ಶನದಲ್ಲಿ ಭಾಗವಹಿಸಿದಾಗ ಎಲ್ಲರೂ ಪ್ರಶಂಸಿಸಿದರು. ಆಗ ಈ ಕಲೆಯ ಬಗ್ಗೆ ನನ್ನಲ್ಲಿ ಪ್ರೀತಿ ಹುಟ್ಟಿತು ಅನಿಸುತ್ತದೆ. ನಂತರ ಏಳು ಮತ್ತು ಎಂಟನೇ ತರಗತಿಯಲ್ಲಿಯೂ ನನ್ನ ಕಲಿಕೆ ಮತ್ತು ಪ್ರದರ್ಶನ ಮುಂದುವರೆಯಿತು. ಹೆಚ್ಚಿನ ಕಲಿಕೆಗೆ ಶಾಲೆ ಬದಲಾಯಿಸಿದಾಗ, ಅಲ್ಲಿಯೂ ಅದೇ ಗುರುಗಳು ಬಂದು ನೃತ್ಯ ಹೇಳಿಕೊಡುತ್ತಿದ್ದರು. ನನಗೆ ಹಣಕಾಸಿನ ಸಮಸ್ಯೆ ಇದೆಯೆಂದು ಅರಿತ ಅದೇ ಶಾಲೆಯ ಮ್ಯಾನೇಜರ್ ನನ್ನನ್ನು ಕಥಕಳಿ ಕಲಿಯಲು ಕಳಿಸಿಕೊಟ್ಟರು. ಹೀಗೆ ನಾನು ಕಥಕಳಿ ಕಲಿಯುತ್ತಲೇ, 10ನೇ ತರಗತಿ ಮತ್ತು 11ನೇ ತರಗತಿಯನ್ನು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಪಾಸಾದೆ. ನಂತರ ಕಾಲೇಜು ಕಲಿಯುವ ಮನಸ್ಸಿರಲಿಲ್ಲ. ನನ್ನ ಕಥಕಳಿ ಕಲಿಕೆಯು ಒಂದು ಔಪಚಾರಿಕ ಹಂತಕ್ಕೆ ಬಂದುದು 1958ರಲ್ಲಿ. 'ಗಾಂಧಿ ಸೇವಾಸದನಂ ಕಥಕಳಿ ಅಂಡ್ ಕ್ಲಾಸಿಕಲ್ ಆರ್ಟ್ಸ್ ಅಕಾಡೆಮಿ'ಗೆ ಪ್ರವೇಶ ಪಡೆಯುವುದರೊಂದಿಗೆ ನನ್ನ ಬದುಕಿನ ಹಾದಿ 'ಕಥಕಳಿ' ಎಂದು ನಿರ್ಧಾರವಾಯಿತು. ಕುಂಡಿವೀಟಿಲ್ ನಾರಾಯಣನ್ ನಾಯರ್, ತೇಕಿನ್‌ಕಾಟ್ಟಿಲ್ ರಾಮುಣ್ಣಿ ನಾಯರ್ ಮತ್ತು ಕೀಳುಪದಂ ಕುಮಾರನ್ ನಾಯರ್ ಅವರಂತಹ ಪ್ರಸಿದ್ಧ ವಿದ್ವಾಂಸರು ಗುರುಗಳಾಗಿ ದೊರೆತು ನನ್ನನ್ನು ರೂಪುಗೊಳಿಸಿದರು. ಸದನಂನಲ್ಲಿ ನಾನು ಎಂಟು ವರ್ಷಗಳ ಡಿಪ್ಲೊಮಾ ಕೋರ್ಸ್ ಮುಗಿಸಿದ ಬಳಿಕ ನನ್ನೂರಿಗೆ ಹೋಗಿ, 'ಪರಸಿನಿಕಡವು ಶ್ರೀ ಮುತ್ತಪ್ಪನ್ ಕಥಕಳಿ ಯೋಗಮ್' ತಂಡದಲ್ಲಿ ಪಾತ್ರ ಮಾಡುತ್ತಿದ್ದೆ. ಆಗ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸ್ಕಾಲರ್‌ಶಿಪ್ ದೊರೆತ ಕಾರಣ ಮತ್ತೆ ಗಾಂಧಿ ಸೇವಾಸದನಂಗೆ ತೆರಳಿ ಸ್ನಾತಕೋತ್ತರ ಅಧ್ಯಯನ ಆರಂಭಿಸಿದೆ. ಅಧ್ಯಯನ